ಎಂಬ ಹೆಸರಿನ ಸಾಕ್ಷಿ ಪ್ರಮಾಣ ಅವನಲ್ಲಿತ್ತು. ಕ್ರಮೇಣ ಅವನು ಹಣೆಯುದ್ದಕ್ಕೂ ಕುಂಕುಮ ಬಳಿದು. ಕೇಸರಿ ರುಮಾಲನ್ನು ಧರಿಸಿ ಹುಚ್ಚೆಬ್ಬಿಸುವ ಭಾಷಣಗಳನ್ನು ಮಾಡುತ್ತಾ ಮುಸ್ಲಿಮರನ್ನು ಕಂಡು ದ್ವೇಷಕಾರುತ್ತಾ, ಪತ್ರಿಕಾ ಹೇಳಿಕೆಗಳನ್ನು ನೀಡುತ್ತಾ ವಾಟ್ಸ್ಆ್ಯಪ್‌ನಲ್ಲಿ ದ್ವೇಷವನ್ನು ಹರಡುವ ಮೆಸೇಜುಗಳನ್ನು ಫಾರ್ವರ್ಡ್ ಮಾಡುತ್ತಾ ತನ್ನದೇ ಆದ ಒಂದು ಸ್ಥಾನವನ್ನು ಭದ್ರಪಡಿಸಿಕೊಂಡ ಅನಂತರ ಅವನ ಅಭಿಮಾನಿ ವಲಯ ಸೃಷ್ಟಿಯಾಗುತ್ತಾ ಹೋಯಿತು. ಮತ್ತು ಅವನು ವಿನಾಯಕನಿಂದ ನಾಯಕ ಎಂದು ಹೆಸರನ್ನು ಬದಲಾಯಿಸಿಕೊಂಡು ವರ್ಚಸ್ಸನ್ನು ಹೆಚ್ಚಿಸಿಕೊಳ್ಳುತ್ತಾ ಹೋದ. ಆದರೆ, ಖಲಂದರ್‌ಗೆ ಮಾತ್ರ ಅವನು ಸಂಜೀವ್ ಅಣ್ಣನ ಮಗನೇ ಆಗಿದ್ದ. ಅಂತರಂಗದಲ್ಲಿ ಖಲಂದರ್‌ಗೆ ಅವನನ್ನು ಕಂಡರೆ, ಅಪಾರ ಭಯ ಮೂಡಿದ್ದರೂ, ಅವನಲ್ಲಿದ್ದ ಹಿಂದಿನ ಸಲಿಗೆಯಿಂದ ಸಹಜವಾಗಿಯೇ ನಡೆದುಕೊಳ್ಳುತ್ತಿದ್ದ. ಹಾಗೆ ವರ್ತಿಸುವಾಗ ಒಮ್ಮೊಮ್ಮೆ ಸಹಜವಾಗಿಯೇ ದ್ವೇಷದ ಭಾವ ಉನ್ಮಾದವಾಗಿ ಖಲಂದರ್‌ನ ಮನಸ್ಸಿನಲ್ಲಿಯೂ ಮೂಡುತ್ತಿತ್ತು.

ಖಲಂದರ್‌ನ ಗಾಡಿಯ ಕೆಳಗೆ ತೂಗಾಡುತ್ತಿದ್ದ ಪ್ಲಾಸ್ಟಿಕ್ ಸ್ಟೂಲನ್ನು ಅದರ ಕೊಂಡಿಯಿಂದ ಕಳಚಿಕೊಂಡು ಅದನ್ನು ಬುಡಕ್ಕೆ ಎಳೆದುಕೊಂಡು ನಾಯಕ್ ಕುಳಿತುಕೊಂಡ. ವ್ಯಾಪಾರದ ಸಲುವಾಗಿ ನಿಂತು ನಿಂತು ಸಾಕಾದಾಗ ಆಗಾಗ್ಗೆ ಕೂರುವ ಸಲುವಾಗಿ ಎಂದು ಖಲಂದರ್ ಒಂದು ಹಗುರವಾದ ಪ್ಲಾಸ್ಟಿಕ್ ಸ್ಟೂಲನ್ನು ಗಾಡಿಯ ಕೆಳಗೆ ಕೊಂಡಿಗೆ ಸಿಲುಕಿಸಿದ್ದ. ಅದು ಖಲಂದರ್‌ನ ತೀರಾ ಖಾಸಗಿ ರಹಸ್ಯವಾಗಿದ್ದರೂ ನಾಯಕ್ ಕೂಡ ಅವನ ಖಾಸಗಿ ವಲಯಕ್ಕೆ ಸೇರಿದವನೇ ಆಗಿದ್ದರಿಂದ ಅಲ್ಲಿನ ಒಳ ವ್ಯವಹಾರವೆಲ್ಲ ಅವನಿಗೆ ತಿಳಿದಿತ್ತು. ಹೇಳದೆ ಕೇಳದೆ ಅವನು ಸ್ಟೂಲ್ ಎಳೆದುಕೊಂಡಿದ್ದನ್ನು ಕಂಡು ಖಲಂದರ್‌ನ ಕೋಪ ಒಮ್ಮೆಲೇ ನೆತ್ತಿಗೇರಿತು. "ಏಳೋ ಮೇಲಕ್ಕೆ'' ಎಂದು ಗದರಿದ. ನಾಯಕ್ ಮಾತ್ರ ಅವನತ್ತ ತಿರುಗಿಯೂ ನೋಡಲಿಲ್ಲ. ಕ್ಯಾರೆ ಅಂತ ಕೂಡ ಅನ್ನಲಿಲ್ಲ. ಬದಲಿಗೆ ಒಂದೆರಡು ಕಪ್ಪು ದ್ರಾಕ್ಷಿಗಳನ್ನು ಕಿತ್ತು ಬಾಯಿಗೆ ಹಾಕಿಕೊಂಡು ಕಾಲಾಡಿಸುತ್ತಾ ಕುಳಿತ. ಖಲಂದರ್‌ಗೆ ಇನ್ನಷ್ಟು ಸಿಟ್ಟೇರಿತು. "ನಾಚಿಕೆ ಬರಲ್ಲ ನಿಂಗೆ? ಯಾಕೆ ಇಲ್ಲಿ ಕೂತಿದ್ದೀಯಾ?'' ಎಂದು ದೊಡ್ಡ ದನಿಯಲ್ಲಿ ಎಗರಾಡಿದ. "ಅಲ್ಲಿ ನೋಡಿದ್ರೆ ಬಸ್‌ಸ್ಟ್ಯಾಂಡ್ ಎದುರಿಗೆ ನಿಂತ್ಕೊಂಡು ಸಾಬರನ್ನ ಪಾಕಿಸ್ತಾನಕ್ಕೆ ಕಳಿಸ್ತೀನಿ ಅಂತೀಯ. ಇಲ್ಲಿಗೆ ಬಂದು ಬಾಯಾಡಿಸಿಕೊಂಡು ಕೂತ್ಕೋತೀಯ'' ಎಂದು ಭಯಂಕರ ಜಗಳಕ್ಕೆ ನಿಂತುಕೊಂಡ. ನಾಯಕ್ ಅನ್ನೋನು ಮಿಸುಕಾಡಲಿಲ್ಲ. "ಬುಡು... ಅತ್ಲಾಗೆ. ನಾನ್ ಹೇಳಿದ್ದು ಸಾಬರಿಗೆ. ನೀನ್ಯಾಕೆ ಮೈಮೇಲೆ ತಗೋತಿಯಾ. ನೀನು ಚಿಗಪ್ಪ ಅಲ್ವಾ? ಅಯ್ಯೋ ಬುಡು... ನೀನೆಂತ ಚಿಗಪ್ಪ. ಮೂರು ತಿಂಗಳಿಂದ ಮನೆಕಡೆ ತಲೆ ಹಾಕಿದ್ದೀಯಾ? ಆ ಮುದುಕನ್ನ ಮಾತಾಡ್ಸಿದೀಯಾ? ಬದುಕಿದೆಯಾ ಸತ್ತಿದೀಯಾ ಸಂಜೀವಣ್ಣ ಅಂತ ಕೇಳಿದೆಯಾ? ನೀನೇ ಯಾವಾಗಲೋ ಪಾಕಿಸ್ತಾನಕ್ಕೆ ಹೋಗಿ ಕೂತಿದ್ದೀಯಾ. ಇನ್ನು ನಾನು ಬೇರೆ ಕಳಿಸಿ ಯಾವ ಪಾಪ ಕಟ್ಕೊಳ್ಳಿ?'' ಎಂದು ಒಂದೇ ಉಸಿರಿನಲ್ಲಿ ಉಲ್ಟಾ ಮಾತನಾಡಿ ಖಲಂದರ್‌ನ ಬಾಯಿ ಬಂದು ಮಾಡಿದ. ಹೌದಲ್ಲವಾ, ಒಳ್ಳೆಯ ಮಜಬೂತು ಆಳಾಗಿದ್ದ ಸಂಜೀವಣ್ಣನಿಗೆ ಅದು ಯಾವ ಕೆಟ್ಟ ದೃಷ್ಟಿ ತಾಗಿತೋ ಲಕ್ವಾ ಅಂತ ಹಾಸಿಗೆ ಹಿಡಿದವನು ಮತ್ತೆ ಮೇಲೇಳಲಿಲ್ಲ. ಇತ್ತೀಚೆಗಂತೂ ಎಲ್ಲಾ ಹಾಸಿಗೆಯಲ್ಲೇ ಅಂತ ಯಾರೋ ಹೇಳುತ್ತಿದ್ದರು. ಒಮ್ಮೆ ಹೋಗಿ ನೋಡಿಕೊಂಡು ಬರಬೇಕು ಎಂದು ಅವನು ಮನದಲ್ಲೇ ನಿಶ್ಚಯಿಸುವಷ್ಟರಲ್ಲಿ ಭರ್ರ್ ಎಂದು ಮೂರ್ನಾಲ್ಕು ಬೈಕ್‌ನಲ್ಲಿ ಅವನ ಪ್ರತಿರೂಪದಂತಿದ್ದ ಯುವಕರ ತಂಡ ಅಲ್ಲಿಗೆ ಬಂದು ನಿಂತಿತು. ಇನ್ನೂ ಒಂದೆರಡು ಹಣ್ಣನ್ನು ಬಾಯಿಗೆ ಎಸೆದುಕೊಂಡು ದೂಸರಾ ಮಾತನಾಡದೇ ನಾಯಕ್ ಒಂದು ಬೈಕಿನ ಹಿಂದೆ ಏರಿದ. ಸುತ್ತಲಿನ ಜನರ ಆಕರ್ಷಣೆಯ ಕೇಂದ್ರವಾದ ತಂಡ ದೂಳೆಬ್ಬಿಸುತ್ತ ಮಾಯವಾಯಿತು.

ಹಾಗೆ ನೋಡಿದರೆ, ಅವನು ಹಣ್ಣಿನ ಅಂಗಡಿಯ ವ್ಯಾಪಾರವನ್ನು ಆರಂಭಿಸಲು ಕೂಡ